ಇಲಾಖೆ / ವಿಷಯ : DEPARTMENT / SUBJECT: ವಿಧಾನ ಪರಿಷತ್

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ ದಿನಾಂಕ : DATE : 4/2/2021

# ಸಭಾಪತಿ ಪ್ರತಾಪ್‌ಚಂದ್ರ ಇಂದು ರಾಜೀನಾಮೆ?

## ರಾಜೀನ್ಸಾಮೆ ಸಲ್ಲಿಸಲು 'ಕೈ' ನಾಯಕರಿಂದ ಸಹಮತ

**ಬೆಂಗಳೂರು:** ಬಿಜೆಪಿ ಹಾಗೂ ಜೆಡಿಎಸ್ ಸದಸ್ಯರು ತಮ್ಮ ವಿರುದ್ಧ ಮಂಡಿಸಿರುವ ಅವಿಶ್ವಾಸ ನಿರ್ಣಯ ಸೂಚನೆ ಹಿನ್ನೆಲೆಯಲ್ಲಿ ವಿಧಾನಪರಿಷತ್ ಸಭಾಪತಿ ಕೆ.ಪ್ರತಾಪಚಂದ್ರ ಶೆಟ್ಟಿ ಅವರು ಗುರುವಾರ ರಾಜೀನಾಮೆ ಸಲ್ಲಿಸುವ ಸಾಧ್ಯತೆ ಇದೆ. ಸಭಾಪತಿ ಹುದ್ದೆಗೆ ಸಂಬಂಧಿಸಿದಂತೆ ಬಿಜೆಪಿ ಹಾಗೂ ಜೆಡಿಎಸ್ ಒಗ್ಗೂಡಿರುವ ಹಿನ್ನೆಲೆಯಲ್ಲಿ ಸಾಧ್ಯವಾದಷ್ಟು ಈ ಪ್ರಹಸನವನ್ನು ಎಳೆಯಬೇಕು ಎಂಬ ಮನಸ್ಥಿತಿಯಲ್ಲಿದ್ದ ಕಾಂಗ್ರೆಸ್ ನಾಯಕರು ಸಭಾಪತಿ ಹುದ್ದೆಗೆ ರಾಜೀನಾಮೆ ಸಲ್ಲಿಸದಂತೆ ತಡೆದಿದ್ದರು. ಆದರೆ, ಬುಧವಾರ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಪ್ರತಾಪಚಂದ್ರಶೆಟ್ಟಿ ಅವರಿಗೆ ರಾಜೀನಾಮೆ ಸಲ್ಲಿಸಲು ನಾಯಕತ್ವದ ಸಹಮತ ದೊರೆಯಿತು ಎನ್ನಲಾಗಿದೆ. ವಾಸ್ತವವಾಗಿ ಕಾಂಗ್ರೆಸ್ ನಾಯಕತ್ವವು ಅವಿಶ್ವಾಸ ನಿರ್ಣಯದ ಸೂಚನೆಯನ್ನು ಐದು ದಿನದೊಳಗೆ ಚರ್ಚಿಸಲು ಅವಕಾಶವಿರುವುದರಿಂದ (ಅಧಿವೇಶನದ ಮುಕ್ತಾಯದ ದಿನಕ್ಕೆ 4 ದಿನವಾಗುತ್ತದೆ) ತಾಂತ್ರಿಕ ನೆಪವೊಡ್ಡಿ ಬಜೆಟ್ ಅಧಿವೇಶನದಲ್ಲಿ ಈ ವಿಷಯ ಚರ್ಚೆಗೆ ತೆಗೆದುಕೊಳ್ಳುವಂತೆ ಮಾಡುವ ಉದ್ದೇಶ ಹೊಂದಿದ್ದರು. ಆದರೆ ಸರ್ಕಾರ ಅಧಿವೇಶನವನ್ನೇ ಕೆಲ ದಿನ ವಿಸ್ತರಿಸುವ ಚಿಂತನೆ ಆರಂಭಿಸಿತ್ತು ಎನ್ನಲಾಗಿದೆ. ಹೀಗಾಗಿ ಈ ವಿಚಾರವನ್ನು ಲಂಭಿಸುವುದು ಬೇಡ ಎಂಬ ಪ್ರತಾಪಚಂದ್ರಶೆಟ್ಟಿ ನಿಲುವಿಗೆ ನಾಯಕತ್ವ ಸಹಮತ ನೀಡಿತು ಎನ್ನಲಾಗಿದೆ.